ಸಿಸಿ ನಂ.81/2023 ಪಿಡಬ್ಲೂ :1

ದಿನಾಂಕಃ 11-06-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರವಾಗಿಃ ಶ್ರೀ ಪಿ ಜಿ ಹೆಚ್ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ.

2. ಫಿರ್ಯಾದುದಾರ ಸಂಸ್ಥೆಯವರು ನನಗೆ ನೀಡಿದ ಅಧಿಕಾರ ಪತ್ರದ ಯಥಾ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಆರೋಪಿಯು ನೀಡಿದ ಚೆಕ್ ಹಾಜರು ಪಡಿಸಿದ್ದು ಅದನ್ನು ನಿಪಿ -2 ಎಂದು ಗುರುತಿಸಲಾಯಿತು . ನಿಪಿ-2 ರಲ್ಲಿರುವ ಸಹಿ ಆರೋಪಿಯ ಸಹಿಯಾಗಿರುತ್ತದೆ . ಸದರಿ ಸಹಿಯನ್ನು ನಿಪಿ -2 ಎ ಎಂದು ಗುರುತಿಸಲಾಯಿತು. ಬ್ಯಾಂಕನವರು ಕೊಟ್ಟಿರುವ ಮೆಮೊವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ -3 ಎಂದು ಗುರುತಿಸಲಾಯಿತು. ನಾವು ನಮ್ಮ ವಕೀಲರ ಮುಖಾಂತರ ಆರೋಪಿಗೆ ನೀಡಿದ ನೋಟಿಸಿನ ಕಚೇರಿ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ -4 ಎಂದು, ಎರಡು ಅಂಚೆ ರಸೀದಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ-5 ಮತ್ತು 6 ಎಂದು , ಅಂಚೆ ಲಕೋಟೆಯನ್ನು ನಿಪಿ-7 ಎಂದು, (ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು ) ಅಂಚೆ ಲಕೋಟೆಯಲ್ಲಿರುವ ನೋಟಿಸನ್ನು ನಿಪಿ-7(ಎ) ಎಂದು, ಅಂಚೆ ಸ್ವೀಕೃತಿಯನ್ನು ನಿಪಿ -8 ಎಂದು, ಸಾಲದ ಅರ್ಜಿಯ ಯಥಾ ನಕಲನ್ನು ನಿಪಿ-9 ಎಂದು , ಶಾಖಾ ವ್ಯವಸ್ಥಾಪಕರ ವರದಿಯನ್ನು ನಿಪಿ-10 ಎಂದು, ಸಾಲದ ಕರಾರು ಪತ್ರದ ಯಥಾ ನಕಲನ್ನು ನಿಪಿ -11 ಎಂದು, ಡಿಮಾಂಡ್ ಪ್ರಾಮಿಸರಿ ನೋಟಿನ ಯಥಾ ನಕಲನ್ನು ನಿಪಿ-12 ಎಂದು, ಅಕೌಂಟ್ ಎಕ್ಸ್ಟ್ರಾಕ್ಟ ಸರ್ಟಿಫಿಕೇಟ್ ನೊಂದಿಗೆ ಯಥಾ ನಕಲನ್ನು ಹಾಜರು

ಪಡಿಸಿದ್ದು ನಿಪಿ–13 ಎಂದು ಗುರುತಿಸಲಾಯಿತು . (ಸಾಕ್ಷಿ ನಿಪಿ–9 ರಿಂದ ನಿಪಿ–13 ರ ಮೂಲ ಪ್ರತಿಗಳನ್ನು ಹಾಜರು ಪಡಿಸಿದ್ದು ಯಥಾ ನಕಲುಗಳೊಂದಿಗೆ ತಾಳೆ ಮಾಡಿ ನೋಡಲಾಗಿ ಸರಿ ಇದ್ದು ಮೂಲ ಪ್ರತಿಗಳನ್ನು ಸಾಕ್ಷಿದಾರರಿಗೆ ಹಿಂದಿರುಗಿಸಲಾಯಿತು. )

( ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.

<u>ಸಿಸಿ ನಂ.</u> <u>ಪಿಡಬ್ಲೂ :1</u>

<u>ದಿನಾಂಕಃ 07-06-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.</u>

**<u>ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರವಾಗಿಃ ಶ್ರೀಮತಿ ಆರ್ ಜಿ ಎನ್ ವಕೀಲರಿಂದಃ</u>**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ.

2. ಫಿರ್ಯಾದುದಾರ ಪರ ವಕೀಲರು ಮುಂಚೆ ಹಾಜರು ಪಡಿಸಿದ್ದ ದಾಖಲೆಗಳನ್ನೇ ನಿಶಾನೆಯಾಗಿ ಪರಿಗಣಿಸಲು ಕೋರಿದ ಮೇರೆಗೆ ದಾಖಲಾತಿಗಳನ್ನು ಈಗಾಗಲೇ ನಿಪಿ -1 ರಿಂದ ನಿಪಿ-14 ಎಂದು ಗುರುತಿಸಲಾಗಿದ್ದು ಸಾಕ್ಷಿ ಈಗಿನ ಹಾಜರು ಪಡಿಸಿದ ಅಧಿಕಾರ ಪತ್ರವನ್ನು ನಿಪಿ -15 ಎಂದು ಗುರುತಿಸಲಾಯಿತು . ಹೈಪೋಥಿಕೇಶನ ಡೀಡ್ ನ ಯಥಾ ನಕಲನ್ನು ನಿಪಿ -16 ಎಂದು ಗುರುತಿಸಲಾಯಿತು.

(ಸಾಕ್ಷಿ ಸದರಿ ದಾಖಲಾತಿಯ ಮೂಲ ಪ್ರತಿಯನ್ನು ಹಾಜರು ಪಡಿಸಿದ್ದು ಯಥಾ ನಕಲಿನೊಂದಿಗೆ ತಾಳೆ ಮಾಡಿ ನೋಡಲಾಗಿ , ಸರಿಯಿದ್ದು ಮೂಲ ಪ್ರತಿಯನ್ನು ಸಾಕ್ಷಿದಾರರಿಗೆ ಹಿಂದಿರುಗಿಸಲಾಗಿದೆ )

( ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.